# ನವರ

## ಇಂಡಿಯನ್ ವಯಾಗ್ರ





**ಅಪ್ಪಟ ದೇಸಿ ತಳಿ ನವರದ ಪ್ರವರ ಸುಲಭಕ್ಕೆ ಮುಗಿಯುವಂತಹದ್ದಲ್ಲ. ನವರದ ಅನ್ನ ರುಚಿಕರ; ಔಷಧಿಯುಕ್ತವೂ ಹೌದು. ನರದೌರ್ಬಲ್ಯಕ್ಕೆ ಉತ್ತಮ ಮದ್ದು. ಬೆನ್ನುನೋವು–ಸಂಧಿವಾತಗಳಂತಹ ಸಂಕಟಗಳನ್ನೂ ಉಪಶಮನಗೊಳಿಸುವುದು. ಮಧುಮೇಹಿಗಳಿಗಿದು ಉತ್ತಮ ಆಹಾರ.**

**■ ಮಲ್ಲಿಕಾರ್ಜುನ ಹೊಸಪಾಳ್ಯ**

ಸಹೋದ್ಯೋಗಿ ನಂಜುಂಡಸ್ವಾಮಿ ಗಾಬರಿಯಿಂದ ಆಫೀಸಿಗೆ ಬಂದರು. ನನ್ನ ಪಕ್ಕದ ಟೇಬಲ್ಲಿನಲ್ಲಿದ್ದ ಕೃಷ್ಣಪ್ರಸಾದರಿಗೆ ಸಲ್ಲಿಸಲು ಅವರ ಬಳಿ ದೂರುಗಳ ದೊಡ್ಡ ಪಟ್ಟಿಯೇ ಇತ್ತು.

‘ಸಾರ್ ಬಸಯ್ಯ ತುಂಬಾ ಸಿಟ್ ಮಾಡಿಕೊಂಡಿದಾರೆ.’

‘ಯಾಕಂತೆ?’

‘ನಾವ್ ಕೊಟ್ಟ ಭತ್ತ ಸರಿಯಾಗ್ ಇಳುವರಿ ಬರ್ನಿಲ್ವಂತೆ. ಇಪ್ಪತ್ ಮೂಟೆ ಬರೋಕಡೆ ಬರೇ ಹದಿಮೂರ್ ಮೂಟೆ ಬಂದದಂತೆ. ನಮ್ಮುನ್ನ ಹಾಳ್ ಮಾಡ್ಬುಟ್ರಿ ಅಂಗೆ ಇಂಗೆ ಅಂತ ಆವಾಜ್ ಹಾಕ್ತಾ ಕುಂತವ್ರೆ. ಪರಿಸ್ಥಿತಿ ಕೈ ಮೀರೊಂಗದೆ.’

‘ಹೌದಾ, ನಡಿರಿ ಅದೇನ್ ವಿಚಾರ್ಸನ’ ಎಂದು ಎದ್ದು ಹೊರಟರಲ್ಲದೆ, ಯಾವುದಕ್ಕೂ ಇರಲಿ ಅಂತ ನನ್ನನ್ನೂ ಜೊತೆಗೆ ಕರೆದುಕೊಂಡರು. ಬಸಯ್ಯ ಪ್ರಭಾವಿ ರೈತರಾದ್ದರಿಂದ ಆಫೀಸಿನಲ್ಲಿ ಎಲ್ಲರಿಗೂ ಗಾಬರಿಯಾಗಿತ್ತು. ಹಂಪೆ ಬಳಿ ಬಸಯ್ಯನವರ ಹಳ್ಳಿ. ರಸ್ತೆ ಪಕ್ಕದಲ್ಲೇ ಮನೆ. ಮನೆ ಮುಂದೆಯೇ ಅವರ ಗದ್ದೆ. ಗದ್ದೆಯಲ್ಲಿ ಟಿಲ್ಲರ್ ಹೊಡೆಯುತ್ತಿದ್ದವರು ನಮ್ಮನ್ನು ನೋಡಿ ಬಂದರು. ಬಂದವರೇ ಬಡಬಡಾಂತ ಹೇಳತೊಡಗಿದರು. ನೀವು ಕೊಟ್ಟ ತಳಿ ಸರಿ ಇಲ್ಲ, ಇಳುವರಿ ಬರಲ್ಲ, ರಸಗೊಬ್ಬರ ಹಾಕಿದ್ರೆ ಬರುತ್ತಿತ್ತು, ನೀವು ಅದನ್ನೂ ಬೇಡ ಅಂದಿರಿ. ಎರೆಗೊಬ್ರ, ಬೇವಿನ ಹಿಂಡಿ, ಪೂಚಿಮರದಮ್ ಅಂತ ಏನೇನೋ ಸಾವಯವ ಹಾಕಿಸಿದಿರಿ. ಈಗ ನಮಗೆ ಲಾಸು ಇತ್ಯಾದಿ ಇತ್ಯಾದಿ.

ನನಗೂ ನಂಜುಂಡಸ್ವಾಮಿಗೂ ಆತಂಕ. ಈ ಗಲಾಟೆಗೆ ಜನ ಸೇರಿ ಧರ್ಮದೇಟು ಬಿದ್ದರೆ ಏನು ಗತಿ ಎಂದು. ಕೃಷ್ಣಪ್ರಸಾದರು ಬಸಯ್ಯನ ಮಾತುಗಳನ್ನು ಕೇಳುವವರೆಗೂ ಕೇಳಿ ನಂತರ ತಮ್ಮದೇ ಸ್ಟೈಲಿನಲ್ಲಿ ಶುರು ಹಚ್ಚಿಕೊಂಡರು. ‘ನಿನಗೆ ಕೊಟ್ಟಿರೋದು ಮಾಮೂಲಿ ಭತ್ತ ಅಲ್ಲ, ನವರ ಅಂತ. ಮೆಡಿಸಿನಲ್ ರೈಸ್. ಇಂಡಿಯನ್ ವಯಾಗ್ರ ಅಂತಾರೆ ಇದನ್ನ. ನರ ದೌರ್ಬಲ್ಯಕ್ಕೆ ಒಳ್ಳೆಯದು. ಕೇರಳದಲ್ಲಿ ತುಂಬಾ ಬೆಳಿತಾರೆ.’

ಬಸಯ್ಯನಿಗೆ ವಯಾಗ್ರ ಗೊತ್ತೋ ಇಲ್ಲವೋ ತಿಳಿಯದು. ಮಕ ಮಕ ನೋಡಿದರು. ಆದರೆ ಅವರ ಸಿಟ್ಟಂತೂ ಕಡಿಮೆಯಾಗಿತ್ತು.

ಬಸಯ್ಯ ಬೆಳೆದ 13 ಕ್ವಿಂಟಾಲ್ ಭತ್ತವನ್ನು ತಾವೇ ಕೊಳ್ಳುವುದಾಗಿಯೂ, ಇತರೆ ಭತ್ತಕ್ಕೆ ಕ್ವಿಂಟಾಲಿಗೆ ಒಂದೂವರೆ ಸಾವಿರ ಇದ್ದರೆ ತಾವು ಈ ಭತ್ತಕ್ಕೆ ಎರಡೂವರೆ ಸಾವಿರ ಕೊಡುವುದಾಗಿಯೂ ಕೃಷ್ಣಪ್ರಸಾದರು ಘೋಷಿಸಿದರು. ನಾಳೆ ನಮ್ಮ ಸಿಬ್ಬಂದಿ ಬಂದು ಭತ್ತ ಒಯ್ಯುವುದಾಗಿ ಹೇಳಿ ವಾಪಸಾದೆವು.

ನಂತರ ತಿಳಿದು ಬಂದ ವಿಷಯವೆಂದರೆ, ಮಾರನೇ ದಿನ ಭತ್ತ ಕೊಳ್ಳಲು ಹೋದಾಗ ಬಸಯ್ಯ ಬರೇ ಮೂರು ಕ್ವಿಂಟಾಲ್ ಮಾತ್ರ